**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ**

**ಫೌಜದಾರಿ ಪ್ರಕರಣ ಸಂಖ್ಯೆ: 206/2015**

**ಸರಕಾರದ ಪರವಾಗಿ ಃ ಪೋಲೀಸ್ ಠಾಣೆ ಸೇಡಂ**

//ವಿರುದ್ಧ//

**ಆರೋಪಿತರು :** 1. ಭೀಮರಾಯ ತಂದೆ ಗೋಪಾಲ ಕುಂಬಾರ,
21 ವರ್ಷ, ಉಃ ವಿದ್ಯಾರ್ಥಿ,
ವಾಸಃ ಹುಳುಗೋಳ, ತಾಃ ಸೇಡಂ.
2. ಹಣಮಂತ ತಂದೆ ಈರಣ್ಣ ಪೂಜಾರಿ,
24 ವರ್ಷ, ಉಃ ವಿದ್ಯಾರ್ಥಿ,
ವಾಸಃ ಬೆನಕನಹಳ್ಳಿ, ತಾಃ ಸೇಡಂ.
3. ಹುಸೇನಪ್ಪ ತಂದೆ ತಿಪ್ಪಣ್ಣ ಮೇತ್ರೆ,
24 ವರ್ಷ, ಉಃ ವಿದ್ಯಾರ್ಥಿ,
ವಾಸಃ ಕೋಡ್ಲಾ, ತಾಃ ಸೇಡಂ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರ ಅನ್ವಯ ಆರೋಪಿತರ ಹೇಳಿಕೆ**

ಪ್ರಶ್ನೆ 1) ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳನ್ನು ಮನಪೂರ್ವಕವಾಗಿ ಕೇಳಿದ್ದಿರಾ ?
ಉಃ ಕೇಳಿರುತ್ತೇನೆ.

ಪ್ರಶ್ನೆ 2) ಚಾಸಾ.1/ಪ್ರಾಸಾ.1 ಗಂಗಯ್ಯ ತಂದೆ ಗಜದಂಡಯ್ಯ, ತಮ್ಮ ಸಾಕ್ಷ್ಯದಲ್ಲಿ ಈಗ ಕಳೆದ 2014-15 ನೇ ಸಾಲಿನಲ್ಲಿ ಬಸ ಪಾಸ ವಿತರಕನಾಗಿ ಸೇಡಂ ಬಸ್ ಸ್ಟಾಂಡ ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದೆ. ಪಾಸುಗಳನ್ನು ನಕಲು ಮಾಡಿರುವುದು ಗೊತ್ತಾಯಿತು. ನಮ್ಮ ಮೇಲ್ವಿಚಾರಕರು ಬಂದು ವಿಚಾರಿಸಿ ನೋಡಲಾಗಿ ಕೆಲ ಪಾಸುಗಳು ನಕಲಾಗಿರುವುದು ಕಂಡು ಬಂದಿತ್ತು. ಇದಾದ ನಂತರ ನಾನು ಪೋಲಿಸ ಠಾಣೆಗೆ ಹೋಗಿ ಸಹಿ ಮಾಡಿರುತ್ತೇನೆ. ಪೋಲಿಸರಿಗೆ ಹೋಳಿಕೆ ಕೊಟ್ಟಿದ್ದೇನೆ. ಪೋಲಿಸ ಠಾಣೆಗೆ ನಾನು ಮತ್ತು ಸೇಕರೆಟರಿಯವರು ಬಂದಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 3) ನೀನು ಇನ್ನೇನಾದರೂ ಹೆಚ್ಚಿಗೆ ಹೇಳುವುದು ಇದೆಯೇ ?
ಉಃ

ಪ್ರಶ್ನೆ 4) ನಿನ್ನ ಪರವಾಗಿ ಯಾವುದಾದರೂ ಸಾಕ್ಷಿಗಳನ್ನು ಮಾಡಿಸುತ್ತೀಯಾ?
ಉಃ

(ಮೇಲ್ಕಂಡ ಹೇಳಿಕೆಗಳನ್ನು ಆರೋಪಿನಿಗೆ ಗೊತ್ತಿದ್ದ ಭಾಷೆಯಲ್ಲಿ ಅಭಿಯೋಜಕರ ಪರ ವಿಚಾರಣೆಯಾದ ಸಾಕ್ಷಿಗಳ ಹೇಳಿಕೆಗಳನ್ನು ಓದಿ ಹೇಳಿ ಆತನ ಹೇಳಿಕೆಯನ್ನು ಪಡೆಯಲಾಯಿತು).

ಸಹಿ/-

ದಿನಾಂಕ 24-03-2026 ಪ್ರ.ದ. ನ್ಯಾ.ದಂ. ಸೇಡಂ.